**ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ**

**ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ**

# ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 27-08-2022 ರಿಂದ 31-08-2022**

ಸಂ. ಗ್ರಾ.ಕೃ.ಹ.ಸೇ.ಬ/066/2022 ದಿನಾಂಕ: 26.08.2022

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 27-08-2022 ರಿಂದ 31-08-2022 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ-1 (27.08.2022) | ದಿನ-2 (28.08.2022) | ದಿನ-3 (29.08.2022) | ದಿನ-4 (30.08.2022) | ದಿನ-5 31.08.2022) | | |
| ಮಳೆ ಪ್ರಮಾಣ (ಮಿ.ಮೀ.) | 7 | 8 | 9 | 8 | 9 | 253.8 | 41↓ |
| ಗರಿಷ್ಠ ಉಷ್ಣಾಂಶ (ºC) | 28 | 30 | 30 | 30 | 30 | 28.2 | 29.6↑ |
| ಕನಿಷ್ಠ ಉಷ್ಣಾಂಶ (ºC) | 24 | 24 | 24 | 24 | 24 | 22.5 | 24↑ |
| ಮೋಡದ ಹೊದಿಕೆ (ಒಕ್ಟಾ) | 7 | 7 | 7 | 7 | 7 | 7 | 7= |
| ಗರಿಷ್ಠ ಆರ್ದ್ರತೆ (ಶೇ.) | 90 | 89 | 89 | 89 | 89 | 96 | 89.2↓ |
| ಕನಿಷ್ಠ ಆರ್ದ್ರತೆ (ಶೇ.) | 81 | 81 | 80 | 80 | 80 | 91.2 | 80.4↓ |
| ಗಾಳಿಯ ವೇಗ (Kmph) | 6 | 5 | 5 | 6 | 5 | 5.4 | 5.4↑ |
| ಗಾಳಿಯ ದಿಕ್ಕು (º) | 288 | 288 | 288 | 270 | 292 | 302 | 285↓ |
| ಮುನ್ಸೂಚನೆ | TSH | TSH | TSH | NIL | NIL | | |
| ಸಂಭವನೀಯತೆ (%) | >75% | >75% | >75% | >75% | >75% | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 31.08.2022 ರಿಂದ 06.09.2022 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ



ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಎಲ್ಲೆಡೆ ಮೋಡಕವಿದ ವಾತಾವರಣವಿರಲಿದ್ದು ಗುಡುಗು-ಮಿಂಚು ಸಹಿತ ಜಿಲ್ಲೆಯಾದ್ಯಂತ, ಹಲವೆಡೆ ಹಗುರದಿಂದ ಸಾಧಾರಣದಿಂದ ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **28-30ºC** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **24ºC** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **89%** ರಿಂದ **90%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **80%** ರಿಂದ **81%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **5-6** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 |
|---|---|---|---|---|---|---|---|---|---|---|---|---|---|
| Rainfall | 3790.4 | 3628.1 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3030.6 |
| Rainy days | 110 | 128 | 105 | 127 | 112 | 107 | 119 | 121 | 112 | 123 | 126 | 152 | 90 |

| Realised Rainfall (18th August to 24th August, 2022) | Rainfall Forecast Map (26th August to 01ST August 2022) | Standardized Precipitation Index Outlook (28.07.2021 to 24.08.2022) | Normalized Difference Vegetation Index |
|---|---|---|---|
|  |  |  |  |

# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| ಬೆಳೆ | ಕೃಷಿ ಸಲಹೆಗಳು |
|---|---|
| **ಅಡಿಕೆ**<br>**(ಅಂಡೊಡಕ ಬಾಧೆ)**<br> | ಅಡಿಕೆಯಲ್ಲಿ ಗೊಂಚಲು ಕಾಯಿಗಳು ತಳಭಾಗದಿಂದ ಒಡಕು ಮೂಡಿ ಕ್ರಮೇಣ ಕಾಯಿಗಳು ಬಲಿಯುವ ಮೊದಲೇ ಹಳದಿ ಬಣ್ಣಕ್ಕೆ ಮಾರ್ಪಟ್ಟು ಉದುರಲಾರಂಭಿಸುತ್ತವೆ.<br>ಮಣ್ಣು ಪರೀಕ್ಷೆಯ ಆಧಾರದ ಮೇಲೆ ಲಘು ಪೋಷಕಾಂಶಗಳಾದ ಬೋರಾನ್ ೨೦ ಗ್ರಾಂ. ಮತ್ತು ಜಿಂಕ್ ೩೦-೪೦ ಗ್ರಾಂ ಅಂತೆ ಪ್ರತಿ ಮರಕ್ಕೆ ಒದಗಿಸುವುದು.<br>ರೈತರು ಮೂರನೇ ಸುತ್ತಿನ ಬೋರ್ಡೋ ದ್ರಾವಣವನ್ನು ಸಿಂಪಡಿಸಬಹುದು. |
| **ಅಡಿಕೆ**<br>**(ಹಿಂಗಾರ ಒಣಗುವ ರೋಗ)**<br> | ಇಂಗಾರ ಒಣಗುವ ರೋಗ ಕಂಡುಬಂದರೆ ೨ ಗ್ರಾಂ ಕಾರ್ಬೆಂಡೈಜಿಮ್+ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವ್ವದು ಸೂಕ್ತ. |
| **ಅಡಿಕೆ**<br>**(ಹಿಂಗಾರ ತಿನ್ನುವ ಹುಳ)**<br> | ಇಂಗಾರ ತಿನ್ನುವ ಹುಳ ಕಂಡುಬಂದರೆ ೨ ಮಿ.ಲೀ ಕ್ಲೋರೋಫೈರಿಫಾಸ್+೨ ಗ್ರಾಂ ಕಾರ್ಬೆಂಡೈಜಿಮ್+ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವ್ವದು ಸೂಕ್ತ. |
| **ಅಡಿಕೆ**<br>**(ಪೋಷಕಾಂಶ ನಿರ್ವಹಣೆ)** | ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರ ನೀಡುವ ೧೫-೨೦ ದಿನಗಳ ಮುನ್ನ ಪ್ರತಿ ಅಡಿಕೆ ಮರಕ್ಕೆ(೬ ವರ್ಷ ಮೇಲ್ಪಟ್ಟ) ೨೫೦-೩೦೦ ಗ್ರಾಂ ನಷ್ಟು ಕೃಷಿ ಸುಣ್ಣವನ್ನು ಹಾಕುವುದು. |
| **ಗೇರು ಬೆಳೆಯಲ್ಲಿ ಎಲೆ ತಿನ್ನುವ ಹುಳು** | ಕೆಂಪು ಬಣ್ಣದ ದುಂಬಿಗಳು ಎಳೆಯ ಚಿಗುರುಗಳನ್ನು ಮತ್ತು ಎಲೆಗಳನ್ನು ತಿಂದು ಹಾಕುತ್ತವೆ. ಈ ಕೀಟ ಕಂಡುಬಂದಲ್ಲಿ ನಿರ್ವಹಣೆಗಾಗಿ ಮೊನೊಕ್ರೋಟೋಫಸ್ ೧.೫ಮಿ.ಲೀ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| **ಗೇರು-(ಕಾಂಡಕೊರಕ)**<br> | ಬಾಧಿತ ಭಾಗವನ್ನು ಸ್ವಚ್ಛಗೊಳಿಸಿ ನಂತರ ಆ ಭಾಗವನ್ನು ಮರಳು ಮಿಶ್ರಿತ ಕ್ಲೋರೋಫೈರಿಫಾಸ್ ಹರಳುಗಳಿಂದ ಮುಚ್ಚುವುದು. |
| **ತೆಂಗು**<br>**(ರೈನೋಸೊರೆಸ್ ದುಂಬಿ)**<br> | ➢ ಗೊಬ್ಬರದ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಬೇಕು.<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಜಿಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಕ್ಲೋರೋಫೈರಿಫಾಸ್ ೧೦ಜಿ+ಮರಳು (೧:೨) ಪ್ರತಿ ಮರಕ್ಕೆ ೧೫೦ ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಿರುವ ಸಣ್ಣ ಪ್ಲಾಸ್ಟಿಕ್ ಚೀಲಗಳಲ್ಲಿ ಕ್ಲೋರೋಫೈರಿಫಾಸ್ ೧೦ಜಿ. ೫ ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ ಇರಿಸುವುದು. ಪ್ರತೀ ೨೫-೩೦ ದಿನಗಳಿಗೊಮ್ಮೆ ಬದಲಾಯಿಸುತ್ತಿರುವುದು. |
| **ತೆಂಗು**<br>**(ಕಾಂಡ ಸೋರುವ ರೋಗ)**<br> | ➢ ಬಾಧಿತ ಭಾಗವನ್ನು ಸ್ವಚ್ಛಗೊಳಿಸಿ ನಂತರ ಆ ಭಾಗವನ್ನು ೧೦% ಬೋರ್ಡೋ ಪೇಸ್ಟ್‌ನ್ನು ಹಚ್ಚುವುದು ಅಥವಾ ೧೦೦ಮಿ.ಲೀ ನೀರಿಗೆ ೮-೧೦ ಗ್ರಾಂ. ಬ್ಲೈಟಾಕ್ಸ್ ನ್ನು ಮಿಶ್ರಿಸಿ ಬುಡಕ್ಕೆ ಹಾಕುವುದು ಅಥವಾ ೨ಮಿ.ಲೀ ಹೆಕ್ಸಾಕೊನೊಜೋಲ್‌ನ್ನು ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಿಸಿ ಬುಡಕ್ಕೆ ಹಾಕುವುದು (ಪ್ರತಿ ಮರಕ್ಕೆ ೮-೧೦ಲೀಟರ್) ಅದರ ಜೊತೆಗೆ ಪ್ರತಿ ಮರಕ್ಕೆ ೫ ಕೆ.ಜಿ ಯಷ್ಟು ಬೇವಿನ ಹಿಂಡಿಯನ್ನು ನೀಡುವುದು. |
| **ತೆಂಗು**<br>**(ಪೋಷಕಾಂಶ ನಿರ್ವಹಣೆ)** | ➢ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರ ನೀಡುವ ೧೫-೨೦ ದಿನಗಳ ಮುನ್ನ ಪ್ರತಿ ತೆಂಗಿನ ಮರಕ್ಕೆ(೬ ವರ್ಷ ಮೇಲ್ಪಟ್ಟ) ೨ಕೆ.ಜಿ ಯಷ್ಟು ಕೃಷಿ ಸುಣ್ಣವನ್ನು ಹಾಕುವುದು. |
| **ಬಾಳೆ**<br>**(ಎಲೆಚುಕ್ಕೆ ರೋಗ)**<br> | ➢ ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ ೧ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ.<br>➢ ೫ ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ ೫ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (೧೫ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು)<br>➢ ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟ ಹಾಗೂ ಅಧಿಕ ಇಳುವರಿ ಪಡೆಯಲು ಪ್ರತಿ ಬಾಳೆಗೊನೆಗೆ ೧೦ಗ್ರಾಂ. ಯುರಿಯಾ+೧೦ಗ್ರಾಂ. ಪೊಟ್ಯಾಷಿಯಂ ಸಲ್ಫೇಟ್+೦.೫ಕಿ.ಗ್ರಾ. ಹಸಿ ಸಗಣಿಯನ್ನು ೧೦೦ಮಿ.ಲೀ ನೀರಿಗೆ ಬೆರೆಸಿ ಗೊನೆಯ ತುದಿಗೆ ಕಟ್ಟುವುದು. |
| **ಬಾಳೆ**<br>**(ಪೋಷಕಾಂಶ ನಿರ್ವಹಣೆ)** | ➢ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರ ನೀಡುವ ೧೫-೨೦ ದಿನಗಳ ಮುನ್ನ ಪ್ರತಿ ಬಾಳೆ ಗಿಡಕ್ಕೆ(೬ ತಿಂಗಳು ಮೇಲ್ಪಟ್ಟ) ೨೦೦ ಗ್ರಾಂ ನಷ್ಟು ಕೃಷಿ ಸುಣ್ಣವನ್ನು ಹಾಕುವುದು. |

| | |
|---|---|
| **ಮಲ್ಲಿಗೆ<br>(ಎಲೆಚುಕ್ಕೆ ರೋಗ)**<br> | ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ ೧ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| **ಕಾಳುಮೆಣಸು<br>(ಶೀಘ್ರ ಸೊರಗು ರೋಗ)**<br> | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ ೧% ಬೋರ್ಡೋ ದ್ರಾವಣವನ್ನು ಅಥವಾ ೨ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡದ ಸುತ್ತ ಹಾಕಬೇಕು. |
| **ಕಾಳುಮೆಣಸು<br>(ನಿಧಾನ ಸೊರಗು ರೋಗ)** | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ ೨ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ನೀರಿಗೆ ಬೆರಸಿ ಬುಡದ ಸುತ್ತ ಹಾಕಬೇಕು. |
| **ತೋಟಗಾರಿಕೆ ಬೆಳೆ<br>(ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರವನ್ನು ಒದಗಿಸುವುದು)** | ೪ ಕಿ.ಗ್ರಾಂ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರದ ಜೊತೆಗೆ ೧ ಕಿ.ಗ್ರಾಂ ಬೆಲ್ಲವನ್ನು ೨೦೦ಲೀ. ನೀರಿನಲ್ಲಿ ಮಿಶ್ರಣ ಮಾಡಿಕೊಳ್ಳಬೇಕು. ಅಡಿಕೆ ಬೆಳೆಗೆ ೨-೩ ಲೀ. ತೆಂಗು ಬೆಳೆಗೆ ೫-೬ಲೀ. ಮತ್ತು ಕಾಳುಮೆಣಸಿನ ಬಳ್ಳಿಗೆ ೨ಲೀಟರ್ ನಷ್ಟು ಗಿಡದ ಬುಡದ ಭಾಗಕ್ಕೆ ನೇರವಾಗಿ ಸುರಿಯಬೇಕು ಅಥವಾ ಶೋಧಿಸಿದ ನಂತರ ಹನಿ ನೀರಾವರಿ ಮೂಲಕ ಕೊಡಬಹುದು ಹಾಗೂ ಇತರೆ ಎಲ್ಲಾ ತರಕಾರಿ ಬೆಳೆಗಳಿಗೆ ಮತ್ತು ಹೂವಿನ ಬೆಳೆಗಳಿಗೆ, ಬೆಳೆಯ ವಯಸ್ಸಿನ ಆಧಾರದ ಮೇಲೆ ಬಳಸಬಹುದು ಅಥವಾ ೪೦೦ ಕಿ.ಗ್ರಾಂ ಚೆನ್ನಾಗಿ ಕಳಿತ ಹಟ್ಟಿ ಗೊಬ್ಬರದೊಂದಿಗೆ ೪ ಕಿ.ಗ್ರಾಂ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರವನ್ನು ಮಿಶ್ರಣ ಮಾಡಿ ೧೦-೧೫ ದಿನಗಳ ನಂತರ ಬೆಳೆಗಳಿಗೆ ಒದಗಿಸುವುದು. |
| **ಭತ್ತ<br>(ಮೊದಲನೆ ಮೇಲು ಗೊಬ್ಬರ)** | ಭತ್ತ ನಾಟಿ/ಬಿತ್ತನೆ ಮಾಡಿದ ೫೦-೫೫ ದಿನಗಳಲ್ಲಿ ಕಳೆತೆಗೆದ ನಂತರ ಪ್ರತಿ ಎಕರೆಗೆ ೧೭.೫೬ಕಿ.ಗ್ರಾಂ. ಯೂರಿಯಾ ಮತ್ತು ೧೩.೫ ಕಿ.ಗ್ರಾಂ. ಮ್ಯೂರಿಯೇಟ್ ಆಫ್ ಪೊಟ್ಯಾಷ್ ಮೇಲುಗೊಬ್ಬರವಾಗಿ ಕೊಡುವುದು. |
| **ಭತ್ತ<br>(ತೆನೆ ಕವಚ ಕೊಳೆರೋಗ)**<br> | ಈ ರೋಗ ನಿರ್ವಹಣೆಗೆ ೦.೫ ಗ್ರಾಂ ಟ್ರೈಫಾಕ್ಸಿಸ್ಟ್ರೋಬಿನ್+ಟೆಬ್ಯುಕೊನಾಜಾಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಅಥವಾ ೨ ಗ್ರಾಂ ಕಾರ್ಬೆಂಡೈಜಿಮ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಸೂಕ್ತ. |
| **ಜಾನುವಾರು-ಹಸು<br>(ಸಾಮಾನ್ಯ ಸಲಹೆ)** | ಜಾನುವಾರುಗಳಿಗೆ ಕಾಲುಬಾಯಿ ಜ್ವರ, ಪಿಪಿಆರ್, ಗಳಲೆರೋಗ, ಕರುಳುಬೇನೆ ಹಾಗೂ ಚಪ್ಪೆ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಸೂಕ್ತ ಸಮಯ.<br>ಪಶು ವೈದ್ಯರ ಸಲಹೆಯ ಆಧಾರದ ಮೆರೆಗೆ ಸೂಕ್ತ ಜಂತುನಾಶಕವನ್ನು ಔಷದೋಪಚಾರ ಮಾಡುವುದು. ಜಾನುವಾರುಗಳನ್ನು ಪರಾವಲಂಬಿ ಕೀಟಗಳಿಂದ ರಕ್ಷಿಸಲು ಕೊಟ್ಟಿಗೆಯಲ್ಲಿ ಲಕ್ಕಿ ಗಿಡ, ತುಳಸಿ ಗಿಡ ಅಥವಾ ನಿಂಬೆ ಗಿಡಗಳ ಸೊಪ್ಪನ್ನು ನೇತು ಹಾಕುವುದು (ಈ ಸೊಪ್ಪುಗಳ ಪರಮಳದಿಂದ ಪರಾವಲಂಬಿ ಕೀಟಗಳ ಹಾವಳಿ ತಗ್ಗುವುದು.) |

**(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)**

**ಶ್ರೀ. ಪ್ರವೀಣ್ ಕೆ.ಎಮ್,**
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.

**ಡಾ. ಕೆ. ವಿ. ಸುಧೀರ್ ಕಾಮತ್,**
ನೋಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.